ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು ನಗರ

**ಸಿ.ಸಿ.ನಂ. 22775/2017**

ಪ್ರಾಸಾಃ 1

| | |
|---|---|
| ಸಾಕ್ಷಿದಾರರ ಹೆಸರು | ಡಿ ತಿಮ್ಮರಾಜು |
| ತಂದೆಯ ಹೆಸರು | ಲೇಟ್ ಟಿ. ದಾಸಪ್ಪ |
| ವಯಸ್ಸು | 64 ವರ್ಷ |
| ಉದ್ಯೋಗ | ನಿವೃತ್ತ ಪಿ.ಎಸ್.ಐ |
| ವಾಸ | ಬಿ.ಟಿ.ಎಂ ಲೇಔಟ್. ಬೆಂಗಳೂರು |

**ಇಂದು ದಿನಾಂಕಃ 31.07.2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆ ದಂ.ಸಂ.ಪ್ರ. ಕಲಂ 299 ರಡಿಯಲ್ಲಿ ಹಿರಿಯ ಸಸಅ ಅವರಿಂದಃ**

1. ನಾನು 2015 ಅಕ್ಟೋಬರ್ ರಿಂದ 2020 ಜುಲೈ ವರೆಗೆ ತಿಲಕ್ ನಗರ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕಾರ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕಃ 09-07-2016 ರಂದು ಸಂಜೆ 7.00 ಗಂಟೆ ಸಮಯದಲ್ಲಿ ನಾನು ಠಾಣೆಯಲ್ಲಿ ಇರುವಾಗ ಎನ್.ಎ.ಎಲ್ ಲೇಔಟ್ ನ ಪಾರ್ಕ್ ನ ಒಳಗೆ ಆರು ಜನರು ಸೇರಿ ಮಾರಕಸ್ತ್ರಗಳನ್ನು ತಮ್ಮಲ್ಲಿ ಇಟ್ಟುಕೊಂಡು ರಸ್ತೆಯಲ್ಲಿ ಹೋಗಿ ಬರುವ ಜನರನ್ನು ಅಡ್ಡಗಟ್ಟಿ ಅವರ ಬಳಿ ಇರಬಹುದಾದ ಹಣ ಮತ್ತು ಒಡವೆ ಕಿತ್ತುಕೊಳ್ಳೋಣ ಎಂದು ಸಂಚುಹಾಕಿ ಕುಳಿತಿದ್ದಾರೆ ಎಂದು ಬಾತ್ಮಿದಾರರಿಂದ ನನಗೆ ಮಾಹಿತಿ ಬಂದಿತ್ತು. ನಾನು, ನನ್ನ ಸಿಬಂದಿಗಳಾದ ಚಾಸಾ-2 ರಿಂದ 4 ಹಾಗೂ ಜ್ಞಾನೇಶ

ಕುಮಾರ ಎಂಬ ಹೆಚ್.ಸಿ ಇವರನ್ನು ಕರೆದುಕೊಂಡು, ಚಾಸಾ–5 ಮತ್ತು 6 ಪಂಚರನ್ನು ಸಹ ಠಾಣೆಗೆ ಕರೆಸಿ ಅವರಿಗೆ ವಿಷಯ ತಿಳಿಸಿ, ಅವರನ್ನೂ ಸಹ ಕರೆದುಕೊಂಡು ಎನ್.ಎ.ಎಲ್ ಲೇಔಟ್ ಪಾರ್ಕ್ ನ ಬಳಿ ಹೋಗಿರುತ್ತೇನೆ.

3. ಚಾಸಾ–3 ರವರಿಗೆ ಮಾತ್ರ ಅವರ ಹತ್ತಿರ ಹೋಗಿ ಏನು ಮಾತನಾಡುತ್ತಿದ್ದರೆ ಎಂದು ತಿಳಿದುಕೊಂಡು ಬಾ ಎಂದು ಹೇಳಿದೆ. ಚಾಸಾ–3 ರವರು ಆರೋಪಿತರು ಇದ್ದ ಜಾಗದ ಬಳಿ ಹೋಗಿ ಅವರ ಮಾತುಗಳನ್ನು ಕೇಳಿಸಿಕೊಂಡು ಬಂದು ರಸ್ತೆಯಲ್ಲಿ ಬರುವ ಜನರನ್ನು ಅಡ್ಡಗಟ್ಟಿ, ಹೆದರಿಸಿ ಅವರಿಂದ  ಹಣ, ಒಡವೆ ಮತ್ತು ಮೊಬೈಲ್ ಗಳನ್ನು ಕಿತ್ತುಕೊಳ್ಳೋಣವೆಂದು ಮಾತನಾಡುತಿದ್ದಾರೆ ಎಂದು ತಿಳಿಸಿದರು.

4. ನಾವು ಮತ್ತು ಸಿಬ್ಬಂದಿಗಳು ಪಂಚರೊಂದಿಗೆ ಸೇರಿ ಒಟ್ಟಿಗೆ ಹೋಗಿ ಸದರಿ ವ್ಯಕ್ತಿಗಳನ್ನು ಸುತ್ತುವರೆದು ಹಿಡಿದುಕೊಂಡೆವು. ಅವರಲ್ಲಿ ಮೂರು ಜನ ನಮಗೆ ಸಿಕ್ಕಿದರು, ಇನ್ನು ಮೂರು ಜನ ನಮಗೆ ಸಿಗದೆ ಓಡಿಹೋದರು. ನಾವು ಹಿಡಿದ ಆರೋಪಿತರ ಹೆಸರು ಸೈಯ್ಯದ್ ಮೆಹಬೂಬ್ ತಂದೆ ಸೈಯ್ಯದ್ ಯುಸುಫ್, 34 ವರ್ಷ, ಮೊಹಮ್ಮದ್ ಶಬೀರ್ ಅಲಿಯಾಸ್ ಶಬ್ಬೀರ್ ಮತ್ತು ಶಂಕರ್ ಅಲಿಯಾಸ್ ಮಾಡ್   ಆಗಿರುತ್ತದೆ. ಓಡಿ ಹೋದವರ ಹೆಸರು ಆರೀಫ್, ಜಬೀಉಲ್ಲಾ, ಜಜಿ ಅಲಿಯಾಸ್ ಲಂಗಡ ಆಗಿರುತ್ತದೆ.

5. ಆರೋಪಿತರ ಬಳಿ ಒಂದು ಕಬ್ಬಿಣದ ಚಾಕು, ಒಂದು ಕಬ್ಬಿಣದ ಲಾಂಗ್, ಒಂದು ಮರದ ದೊಣ್ಣೆ, ಒಂದು ಖಾರದ ಪುಡಿಯ ಪೊಟ್ಟಣ ಮತ್ತು ಸಾಮ್ ಸಂಗ್ ಗ್ಯಾಲಕ್ಸಿ ನೋಟ್ -2 ಇದ್ದವು. ಸದರಿ ಮಾರಕಾಸ್ತ್ರಗಳನ್ನು ಮತ್ತು ಫೋನ್ ಅನ್ನು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತೇನೆ. ಅಮಾನತ್ತು ಪಡಿಸಿಕೊಂಡ ಬಗ್ಗೆ ನ್ಯಾಯಾಲಯಕ್ಕೆ ವರದಿ ಮಾಡಿರುತ್ತೇನೆ. ಆರೋಪಿತರನ್ನು ಠಾಣೆಗೆ ಕರೆದಂತು ಬಂಧನದ ಪ್ರಕ್ರಿಯೆಗಳನ್ನು ಕೈಗೊಂಡು ಮರುದಿನ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

6. ದಿನಾಂಕಃ 10-07-2016 ರಂದು 1ನೇ ಆರೋಪಿಯು ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ಸುಲಿಗೆ ಮಾಡಿದ ಮೊಬೈಲ್ಗಳನ್ನು ಮನೆಯಲ್ಲಿ ಇಟ್ಟಿರುವುದಾಗಿ ತಿಳಿಸಿದ್ದರಿಂದ ಪಂಚರಾದ ಚಾಸಾ-7 ಮತ್ತು 8 ರವರನ್ನು ಕರೆದುಕೊಂಡು ಹೋಗಿ 1ನೇ ಆರೋಪಿಯ ಮನೆಯಲ್ಲಿ 1ನೇ ಆರೋಪಿಯೇ ತೆಗೆದುಕೊಟ್ಟ ಒಟ್ಟು 8 ಮೊಬೈಲ್‌ಗಳನ್ನು ಪಂಚನಾಮೆ ಅಡಿ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಸದರಿ ಮೊಬೈಲ್ ಗಳನ್ನು ಅಮಾನತ್ತುಪಡಿಸಿಕೊಂಡ ಬಗ್ಗೆ ನ್ಯಾಯಾಲಯಕ್ಕೆ ವರದಿ ಮಾಡಿರುತ್ತೇನೆ.

7. ಪಂಚರಾದ ಚಾಸಾ-5 ರಿಂದ 8, ಸಿಬ್ಬಂದಿಗಳಾದ ಚಾಸಾ-2 ರಿಂದ 4 ಹಾಗೂ ಜ್ಞಾನೇಶ್ ಕುಮಾರ್ ಇವರುಗಳ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. 1 ರಿಂದ

3ನೇ ಆರೋಪಿತರ ಹೇಳಿಕೆಗಳನ್ನೂ ಸಹ ದಾಖಲಿಸಿಕೊಂಡಿರುತ್ತೇನೆ. ನಂತರ ಮುಂದಿನ ತನಿಖೆಯನ್ನು ಚಾಸಾ-9 ರವರಿಗೆ ವಹಿಸಿಕೊಂಡಿರುತ್ತೇನೆ.

8. ಸಾಕ್ಷಿಯು ನೋಡಿ ಗುರುತಿಸಿದ ದಾಖಲೆಗಳನ್ನು ಈ ಕೆಳಗಿನಂತರೆ ನಿಶಾನೆಗಳಾಗಿ ಗುರುತಿಸಲಾಗಿದೆಃ-

ನಿಪಿ-1: ದಿಃ 09-07-2016 ರ ನಿವೇದನೆಯ ಜೆರಾಕ್ಸ್ ಪ್ರತಿ
ನಿಪಿ-1(ಎ): ಸಾಕ್ಷಿಯ ಸಹಿ
ನಿಪಿ-2: ಪ್ರಥಮ ವರ್ತಮಾನ ವರದಿ ಜೆರಾಕ್ಸ್ ಪ್ರತಿ
ನಿಪಿ-2(ಎ): ಸಾಕ್ಷಿಯ ಸಹಿ
ನಿಪಿ-3:ಪಂಚನಾಮೆಯ ಜೆರಾಕ್ಸ್ ಪ್ರತಿ
ನಿಪಿ-3(ಎ): ಸಾಕ್ಷಿಯ ಸಹಿ
ನಿಪಿ-4:1ನೇ ಆರೋಪಿಯ ಸ್ವಇಚ್ಛಾ ಹೇಳಿಕೆಯ 3ನೇ ಪುಟದ ಕೊನೆಯ ಮೂರು ಸಾಲುಗಳು
ನಿಪಿ-4(ಎ): ಸಾಕ್ಷಿಯ ಸಹಿ
ನಿಪಿ-5: ಅಮಾನತ್ತು ಪಂಚನಾಮೆ ಜೆರಾಕ್ಸ್ ಪ್ರತಿ
ನಿಪಿ-5(ಎ): ಸಾಕ್ಷಿಯ ಸಹಿ

9. ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ. ಜಪ್ತು ಪಡಿಸಿಕೊಂಡ ವಸ್ತುಗಳು ಮತ್ತು ಮೊಬೈಲ್ಗಳನ್ನು ನೋಡಿದರೆ ಗುರುತಿಸಬಲ್ಲೆ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

**(ರಂಗೇಗೌಡ ಸಿ)**

ಮು. ಮ. ಚಂ. ನ್ಯಾ. ಬೆಂ. ನಗರ.